ಸರ್ಕಾರ ಇವುಗಳನ್ನು ಪುನ ಶ್ಚೇತನಗೊಳಿಸಲು ಯಾವ ಕ್ರಮ ಕೈಗೊಂಡಿದೆ. ವಿವರ ನೀಡುವುದು?

ಶ್ರೀ ಆರ್ ವಿ ದೇಶ್‌ಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಶಿವಮೊಗ್ಗ ತಾಲ್ಲೂಕು, ಮಾಚೇನಹಳ್ಳಿ ಕೈಗಾರಿಕಾ ವಸಾಹತು ಪ್ರದೇಶಾಭಿವೃದ್ಧಿಗಾಗಿ ಒಟ್ಟು 154 ಎಕರೆ 36 ಗುಂಟೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ

2 ಈ ಬಗ್ಗೆ ಒಟ್ಟು ರೂ 2,14,11, 349-00 ಗಳ ಪರಿಹಾರವನ್ನು ಭೂ ಮಾಲೀಕರಿಗೆ ಪಾವತಿಸಲಾಗಿದೆ

3 ದಿನಾಂಕ 13-8-2003 ರಂದು ನಡೆದ ಮಂಡಳಿಯ 252ನೇ ಸಭೆಯಲ್ಲಿ ನಿಧಿಗೆ ಗ್ರಾಮದ ಸ ನಂ 131, 139 ಮತ್ತು 156 ರಲ್ಲಿ ಒಟ್ಟು 295, ಎಕರೆ 37 ಗುಂಟೆ ಸರ್ಕಾರಿ ಜಮೀನನ್ನು ಮಂಡಳಿಯ ಹಾಲಿ ಸ್ಥಿತಿಯಂತೆ ಸ್ವಾಧೀನ ಪಡೆಯುವುದು ಸಾಧ್ಯವಿರುವುದಿಲ್ಲವೆಂದು ಸದರಿ ಪ್ರದೇಶದಲ್ಲಿ ಕೈಗಾರಿಕೆಗೆ ಬೇಡಿಕೆ ಇಲ್ಲವೆಂದು ತೀರ್ಮಾನಿಸಿ ಪ್ರಸ್ತುತ ಸದರಿ ಭೂ ಸ್ವಾಧೀನತೆಯನ್ನು ಕೈ ಬಿಡಲಾಗಿದೆ ಆದುದರಿಂದ ಕಕ್ಕೆ ಪ್ರಣ ಮಂಡಳಿಯಿಂದ ಎಕ್ಸ್‌ಗ್ರೇಷಿಯಾ ಪಾವತಿಸು ಪ್ರಶ್ನೆ ಉದ್ಭವಿಸುವುದಿಲ್ಲ

ಆ) ಸದರಿ ಕೈಗಾರಿಕಾ ಪ್ರದೇಶಕ್ಕೆ 10 ಎಂಜಿಡಿ ನೀರು ಸರಬರಾಜು ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಗುತ್ತಿಗೆದಾರರನ್ನು ಈಗಾಗಲೇ ನೇಮಿಸಿ ತಾ 29-12-2003 ರಂದು ಕಾರ್ಯಾದೇಶ ನೀಡಲಾಗಿದೆ

ಇ) ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 152 ನಿವೇಶನಗಳನ್ನು 74 ಘಟಕಗಳಿಗೆ ಹಂಚಿಕೆ ಮಾಡಲಾಗಿದೆ ಇದರಲ್ಲಿ ಹಾಲಿ 64 ಘಟಕಗಳು ನಡೆಯುತ್ತಿದ್ದು, 10 ಘಟಕಗಳು ಸ್ಥಗಿತಗೊಂಡಿರುತ್ತದೆ

ಸರ್ಕಾರಿ ಆದೇಶ ಸಂಖ್ಯೆ ಸಿಐ 167 ಎಸ್‌ಪಿಐ 2001 ರ ಆದೇಶದಲ್ಲಿ ಪ್ರಚಾರಪಡಿಸಿದನ್ವಯ ರೋಗಗ್ರಸ್ತ ಕೈಗಾರಿಕೆ ಘಟಕಗಳನ್ನು ಪುನ' ಶ್ಚೇತನಗೊಳಿಸುವ ಬಗ್ಗೆ ನಿಬಂಧನೆ ಮತ್ತು ನೀತಿಯನ್ನು ರೂಪಿಸಲು ಕ್ರಮ ಜರುಗಿಸಲಾಗಿದೆ

ಶಿವಮೊಗ್ಗ ತಾಲ್ಲೂಕಿನಲ್ಲಿ ಬರುವ ಕೆರೆಗಳಲ್ಲಿ ಮೀನು ಮರಿ ಉತ್ಪಾದನೆ

223 (249) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಬರುವ ಎಷ್ಟು ಕೆರೆಗಳಲ್ಲಿ ಮೀನುಮರಿ ಬಿಡಲಾಗಿದೆ ಹಾಗೂ ಇವುಗಳಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ವಿವರ ನೀಡುವುದು?

ಶ್ರೀ ವಸಂತ ವಿ ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಒಟ್ಟು 213 ಕೆರೆಗಳಲ್ಲಿ ಮೀನುಮರಿ ಬಿತ್ತನೆ ಮಾಡಲಾಗಿದೆ 2003-04ನೇ ಸಾಲಿನಲ್ಲಿ ವಿಲೇವಾರಿಯಾದ ಕೆರೆಗಳ ಗುತ್ತಿಗೆಯ ಮೊತ್ತ ಮತ್ತು ಈ ಕೆರೆಗಳಿಗೆ ಮಾರಾಟ ಮಾಡಿದ ಮೀನುಮರಿಗಳಿಂದ ಬಂದ ಒಟ್ಟು ಆದಾಯ ರೂ 2,93,377=00 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 249 ರ ಅನುಬಂಧ

ಶಿವಮೊಗ್ಗ ತಾಲ್ಲೂಕಿನ ಕೆರೆಗಳಿಂದ 2003-04ನೇ ಸಾಲಿನಲ್ಲಿ ಸರ್ಕಾರಕ್ಕೆ ಬಂದ ಆದಾಯದ ವಿವರಗಳು

(ರೂ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕೆರೆಗಳ ವಿವರ	ಮೀನುಮರಿ ಮಾರಾಟದಿಂದ ಬಂದ ಆದಾಯ (ರೂ)	ಕೆರೆಗಳ ವಿಲೇವಾರಿಯಿಂದ ಬಂದ ಆದಾಯ (ಗುತ್ತಿಗೆ ಮತ್ತು ಟೆಂಡರು ಹರಾಜು) (ರೂ)	ಒಟ್ಟು ಆದಾಯ (ರೂ)
1	ದೊಡ್ಡ ಕೆರೆಗಳು (ಇಲಾಖೆ ಮತ್ತು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕೆರೆಗಳು)	97100	71335	168435
2	ಸಣ್ಣ ಕೆರೆಗಳು (ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ವ್ಯಾಪ್ತಿಯ ಕೆರೆಗಳು)	112892	12050	124942
	ಒಟ್ಟು ರೂ	209992	83385	293377